ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಮುಂಬಯಿ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಅನಭಿವೃದ್ಧಿ ಪ್ರದೇಶಗಳಿಗೆ ಹೆಚ್ಚಿನ ಪ್ಯಾಕೇಜ್ ಅನ್ನು, ಅದಕ್ಕೆ ಬೇಕಾದಂತಹ ಹಣಕಾಸನ್ನು ಒದಗಿಸುವಂತಹ ಯೋಜನೆಯನ್ನು ನಾನು ಮಾಡಿದ್ದೇನೆ, ಅದನ್ನು ಕಾರ್ಯರೂಪಕ್ಕೆ ತರುತ್ತೇವೆಂದು ನಿನ್ನೆ ಕೂಡ ಹೇಳಿದ್ದಾರೆ. ಆದುದರಿಂದ ಸರ್ಕಾರದ ಪ್ರಾಮಾಣಿಕತೆ ಬಗ್ಗೆ ಸಂಶಯ ಪಡತಕ್ಕಂಥದಲ್ಲ. ನಿಮ್ಮ ಜೊತೆಗೆ ನಮ್ಮ ಸಹಮತ ಇದೆ ಎನ್ನುವಂತಹ ಮಾತನ್ನು ಕೂಡ ತಮ್ಮ ಅಪ್ಪಣೆ ಮೂಲಕ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ಮುಗಿಸುತ್ತೇನೆ, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಬೆಳಗಾಂನಲ್ಲಿ ಆಗಬೇಕೇ ಅಥವಾ ಗುಲ್ಬರ್ಗದಲ್ಲಿ ಆಗಬೇಕು ಎನ್ನುವಂತಾದ್ದು ಅಲ್ಲಿ ಜಿಜ್ಞಾಸೆ ಇವತ್ತು ಇಲ್ಲ. ಇವತ್ತು ಅವರು ಒಮ್ಮತದಲ್ಲಿ ಇದ್ದಾರೆ. ಅವರಿಗೆ ಬೇಕಾಗಿರತಕ್ಕಂಥಾದ್ದು ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ. ಒಮದೆ ಒಂದು ಎಲ್ಲಾದರೂ ಮಾಡಿ. ಆ ಪ್ರಶ್ನೆ ಇಲ್ಲ. ಆದರೆ ಇವತ್ತು ವಿಳಂಬ ಆಗುವುದಕ್ಕೆ ಕಾರಣವೇನು? ಇದು ಉದ್ದೇಶಪೂರ್ವಕವಾಗಿ ಎಲ್ಲೋ ಒಂದು ಕಡೆ ಪಿತೂರಿ ನಡೆಯುತ್ತಿದೆ. ತಮಿಳುನಾಡಿನಲ್ಲಿ ಆಯಿತಲ್ಲ, ಇಲ್ಲಿ ಏಕೆ ಆಗಲಿಲ್ಲ? ತಮಗೆ ಹೇಳುತ್ತೇನೆ, ಮುಖ್ಯ ನ್ಯಾಯಾಧೀಶರಾಗಿ ಮಾನ್ಯ ಶ್ರೀ ಡಿ.ಎಂ. ಚಂದ್ರಶೇಖರ್ ಇದ್ದರು. ಆಗಲೇ ಹೈಕೋರ್ಟ್ ಪೀಠ ಉತ್ತರ ಕರ್ನಾಟಕಕ್ಕೆ ಆಗಬೇಕೆಂದು ತೀರ್ಮಾನವಾಗಿದೆ. ಈಗ ಒಂದು ಉಪಸಮಿತಿ ಕೂಡ ನೇಮಕವಾಯಿತು. ಆ ಉಪಸಮಿತಿ ಕೂಡ ಸಂಪೂರ್ಣವಾಗಿ ಹೈಕೋರ್ಟ್ ಪೀಠ ಉತ್ತರ ಕರ್ನಾಟಕದಲ್ಲಿ ಆಗಬೇಕೆಂದು ಆಗಿದೆ. ಇಷ್ಟೆಲ್ಲಾ ವ್ಯವಸ್ಥೆ ಇದ್ದರೂ ಕೂಡ ಉತ್ತರ ಕರ್ನಾಟಕದ ಬಗ್ಗೆ ಮಾನ್ಯ ಸಂಸದೀಯ ಸಚಿವರು ಏನು ಹೇಳಿದರು ಆ ವಿಚಾರವನ್ನು, ಇದೇ ಉಪದೇಶವನ್ನು ಈ ಸದನದಲ್ಲಿ ಹೇಳುತ್ತಾ ಬಂದಿದ್ದಾರೆ. ಇದರ ಬಗ್ಗೆ ಸ್ಪಷ್ಟವಾದಂತಹ ನಿಲುವು ಇಲ್ಲ. ಒಂದು ಸಾರಿ ಸದನ ಆರಂಭವಾಯಿತೆಂದರೆ ಮುಖ್ಯ ನ್ಯಾಯಾಧೀಶರನ್ನು ಭೇಟಿ ಮಾಡುವುದು, ಅಲ್ಲಿಂದ ಬರುವುದು ಅಲ್ಲಿಗೆ ಮುಗಿಯಿತು. ಈಗಾಗಲೇ ಪಶುಸಂಗೋಪನಾ ಇಲಾಖೆ, ಅದೇ ದನದ ಕೊಟ್ಟಿಗೆ ಅಲ್ಲಿ ಒಂದು ಆರಂಭವಾಗಿದೆ. ಉತ್ತರ ಕರ್ನಾಟಕದ ಬೆಳವಣಿಗೆ ಮುಗಿಯಿತ್ತಾ? ಖಂಡಿತಾ ಇಲ್ಲ. ಡಾ: ನಂಜುಂಡಪ್ಪನವರ ವರದಿ ಮೂಲೆಗುಂಪು ಮಾಡಿದ್ದಾರೆ. ನಾನು ತಮಗೆ ಹೇಳುತ್ತಿದ್ದೇನೆ, ನನಗೆ ಇವತ್ತು ಸರ್ಕಾರದ ನೀತಿಯ ಬಗ್ಗೆ ನಂಬಿಕೆ ಇಲ್ಲ. ಆದುದರಿಂದ ಉತ್ತರ ಕರ್ನಾಟಕಕ್ಕೆ ಹೈಕೋರ್ಟ್ ಪೀಠ ಆಗಬೇಕು, ಹಾಗು ಡಾ: ನಂಜುಂಡಪ್ಪ ಅವರ ವರದಿ ಸೇರಿದಂತೆ ಅನುಷ್ಠಾನ ಮಾಡಬೇಕೆಂದು ಹೇಳಿ ನಾನು ಧರಣಿ ಮಾಡುತ್ತೇನೆ.

ಸಭಾಧ್ಯಕ್ಷರು : ವಾಟಾಳ್ ನಾಗರಾಜ್ ಅವರೆ, ತಾವು ಈ ವಿಚಾರವನ್ನು ಬೇರೆ ರೂಪದಲ್ಲಿ ಪ್ರಸ್ತಾಪ ಮಾಡಬಹುದು. ಅದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಆಗ ಹೈಕೋರ್ಟ್ ಪೀಠದ ಬಗ್ಗೆ ಮಾತನಾಡಿ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮ ಆಸನವನ್ನು ಬಿಟ್ಟು ಧರಣಿ ಮಾಡಲು ಭಾವಿಗೆ ಬಂದು ಕುಳಿತರು)

(ಆ) ವಿಷಯ : ಚಿಕ್ಕಮಗಳೂರು ಹಾಗೂ ಇತರ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ನಕ್ಸಲೈಟ್ ಹಾವಳಿ ಬಗ್ಗೆ

†ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ಪಶ್ಚಿಮ ಘಟ್ಟದ ಪ್ರದೇಶದಲ್ಲಿ, ಚಿಕ್ಕಮಗಳೂರು, ಶಿವಮೊಗ್ಗ, ದಕ್ಷಿಣ ಕನ್ನಡ, ಉಡುಪಿ ಭಾಗದಲ್ಲಿ ನಕ್ಸಲೈಟ್ ಹಾವಳಿ ಗಂಭೀರವಾಗಿದೆ. ಜನ ಆತಂಕದ ಸ್ಥಿತಿಯಲ್ಲಿ ಬದುಕಬೇಕಾದಂತಹ ಒಂದು ವಾತಾವರಣ ಇದೆ. ಹಾಡುಹಗಲೇ ಅವರು